**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**ಸಿ.ಸಿ.ನಂ. 779/2022**

ದಿನಾಂಕಃ **12-11-2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು ಃ | ನಾಗೇಗೌಡ ಕೆ ಎನ್ | ಚಾಸಾ-11, ಪ್ರಾಸ-9 |
| ಗಂಡನ ಹೆಸರು ಃ | ನಿಂಗೇಗೌಡ | |
| ವಯಸ್ಸು ಃ | 53 ವರ್ಷ | |
| ಉದ್ಯೋಗ ಃ | ಎ ಎಸ್ ಐ | |
| ವಾಸ ಃ | ಕಡೂರು | |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನಾನು 2023 ನೇ ಸಾಲಿನಲ್ಲಿ ಬೀರೂರು ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ಈ ಪ್ರಕರಣದ ಕಡತವನ್ನು ದಿಃ 03.08.2021 ರಂದು ಚಾಸಾ-9 ರವರಿಂದ ಪಡೆದು ಪರಿಶೀಲನೆ ನಡೆಸಿರುತ್ತೇನೆ. ಅದೇ ದಿನ ಸ್ಥಳ ಮಹಜರ್ ಮಾಡುವ ಸಂಬಂಧ ಗಾಳಿಹಳ್ಳಿ ಗ್ರಾಮಕ್ಕೆ ಹೋಗಿದ್ದು ಗ್ರಾಮದಲ್ಲಿ ಪಿರ್ಯಾದಿ ಹಾಗೂ ಪ್ರತ್ಯಕ್ಷ ಸಾಕ್ಷಿದಾರರು ಯಾರು ಇಲ್ಲದ ಕಾರಣ ಆ ದಿನ ಮಹಜರು ಕಾರ್ಯ ಮಾಡಿರುವುದಿಲ್ಲ. ದಿಃ 05.08.2021 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಪಂಚರಾದ ಚಾಸಾ-3 ಮತ್ತು 4 ರವರಿಗೆ ನಿಪಿ-7 ರಂತೆ ನೋಟಿಸನ್ನು ನೀಡಿ ಸ್ಥಳಕ್ಕೆ ಬರ ಮಾಡಿಕೊಂಡಿರುತ್ತೇನೆ. ನಂತರ ಚಾಸಾ-1 ರವರು ತೋರಿಸಿದ ಸ್ಥಳವಾದ ಗ್ರಾಮದ ಗಿರಿಯಪ್ಪನವರ ಜಮೀನಿನ ಹತ್ತಿರ ಬೆಳಗ್ಗೆ 10.00 ರಿಂದ 12.30 ಗಂಟೆವರೆಗೆ ನಿಪಿ-2 ರಂತೆ ಮಹಜರ್ ಕ್ರಮ ಜರುಗಿಸಿರುತ್ತೇನೆ. ನಂತರ ಗಾಳಿಹಳ್ಳಿ ಗ್ರಾಮದ ಹಿತ್ತಲಿನ ಬಾಗಿಲಿನ ಬಳಿ 1 ರಿಂದ 4 ನೇ ಆರೋಪಿತರು ದೊಣ್ಣೆ ಮತ್ತು ಮಚ್ಚಿನಿಂದ ಹಲ್ಲೆ ಮಾಡಿದ ಜಾಗವನ್ನು ತೋರಿಸಿದ ಮೇರೆಗೆ 10.00 ರಿಂದ 12.30 ರವರೆಗೆ ಜರುಗಿಸಿರುತ್ತೇನೆ. ಸ್ಥಳದಲ್ಲಿದ್ದ ಮುಮಾ-1 ಮತ್ತು 2 ನ್ನು ಪಂಚರ ಸಮಕ್ಷಮ ವಶಪಡಿಸಿಕೊಂಡು ಠಾಣಾ ಪಿ ಎಫ್ ಸಂಖ್ಯೆ 89ಃ2021 ರಂತೆ ಅಳವಡಿಸಿ ನ್ಯಾಯಾಲಯಕ್ಕೆ ವರದಿ ಮಾಡಿರುತ್ತೇನೆ. ನಂತರ ಸಾಕ್ಷಿದಾರರಾದ ಚಾಸಾ-2, 5, 6 ರವರ ಹೇಳಿಕೆ ದಾಖಲಿಸಿರುತ್ತೇನೆ. ದಿಃ 06.08.2021 ರಂದು ಚಾಸಾ-2 ರವರ ಡಿಸ್ ಚಾರ್ಜ ಸಮ್ಮರಿಯನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಿಂದ ಪಡೆದಿರುತ್ತೇನೆ. ದಿಃ 07.08.2021 ರಂದು ಆರೋಪಿತರು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದುಕೊಂಡಿರುವ ಬಗ್ಗೆ ಠಾಣಾ ಸಿಬ್ಬಂದಿ ನನಗೆ ಮಾಹಿತಿ ನೀಡಿರುತ್ತಾರೆ. ದಿಃ 25.08.2021 ರಂದು ಚಾಸಾ-1 ರವರ ಕಲಂ 164 ರ ಹೇಳಿಕೆಯನ್ನು ದಾಖಲಿಸುವಂತೆ ಕೋರಿ ಠಾಣಾ ಮಹಿಳಾ ಸಿಬ್ಬಂದಿ ಮೂಲಕ ಕಳುಹಿಸಿರುತ್ತೇನೆ. ದಿಃ 15.09.2021 ರಂದು ಕಲಂ 164 ರ ಹೇಳಿಕೆಯನ್ನು ನ್ಯಾಯಾಲಯದಿಂದ ಪಡೆದಿರುತ್ತೇನೆ. ದಿಃ 17.09.2021 ರಂದು ಬೀರೂರು ಸರ್ಕಾರಿ ಆಸ್ಪತ್ರೆಯಿಂದ ಚಾಸಾ-1 ಮತ್ತು 2 ರವರ ಗಾಯದ ಪ್ರಮಾಣಪತ್ರವನ್ನು ಬೀರೂರು ಸರ್ಕಾರಿ ಆಸ್ಪತ್ರೆಯಿಂದ ಪಡೆದಿರುತ್ತೇನೆ. ನಂತರ ತನಿಖೆಯನ್ನು ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರ ಸಲ್ಲಿಸಿರುತ್ತೇನೆ. ಸಾಕ್ಷಿ ನಿಪಿ-2 ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ತೆಗೆಯಲಾದ ನಿಪಿ-3 ರಿಂದ 5 ರ ಛಾಯಾಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ. ಪಂಚರಿಗೆ ನೀಡಿರುವ ನಿಪಿ-7 ರ ನೋಟಿಸಿನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-7(ಸಿ) ಎಂದು ಗುರುತಿಸಲಾಯಿತು. ನಿಪಿ-9 ಮತ್ತು 10 ರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು

ಅವುಗಳನ್ನು ನಿಪಿ-9(ಬಿ) ಮತ್ತು 10(ಬಿ) ಎಂದು ಗುರುತಿಸಲಾಯಿತು. ಮುಮಾಗಳು ಮತ್ತು ನ್ಯಾಯಾಲಯದ ಮುಂದಿರುವ 1 ಮತ್ತು 2 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. 3 ಮತ್ತು 4 ನೇ ಆರೋಪಿತರು ಈ ದಿನ ನ್ಯಾಯಾಲಯಕ್ಕೆ ಹಾಜರಾಗಲು ವಿನಾಯ್ತಿ ಪಡೆದಿದ್ದು, ಆರೋಪಿ ಪರ ವಕೀಲರು ಅವರ ಗುರುತಿನ ಬಗ್ಗೆ ತಕರಾರು ಇರುವುದಿಲ್ಲ ಎಂದು ನುಡಿಯುತ್ತಾರೆ.

<u>ಪಾಟೀಸವಾಲುಃ ಆರೋಪಿ ಪರ ಶ್ರೀ.ಕೆ ಎಸ್ ಆರ್ ವಕೀಲರಿಂದಃ</u>

ಆರೋಪಿತರು ಮತ್ತು ಪಿರ್ಯಾದುದಾರರು ಒಂದೇ ಊರಿನವರು ಎಂದರೆ ಸರಿ. ಪಿರ್ಯಾದುದಾರರ ವಿರುದ್ಧ ಸಿಸಿ ಸಂಖ್ಯೆ 5ಃ2022 ರಂತೆ ಪ್ರತಿ ದೂರು ಇರುತ್ತದೆ ಎಂದರೆ ಸರಿ. ಆರೋಪಿತರಿಗೂ ಪಿರ್ಯಾದುದಾರರಿಗೂ ಯಾವ ವಿಚಾರಕ್ಕೆ ಗಲಾಟೆಯಾಯಿತು ಎಂದು ನಾನು ತಿಳಿದುಕೊಂಡಿರುವುದಿಲ್ಲ. ಚಾಸಾ-1 ರಿಂದ 3 ಒಂದೇ ಮನೆಯವರು ಎಂದರೆ ಸರಿ. ನಾನು ಘಟನೆ ನಡೆದ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿರುತ್ತೇನೆ. ಘಟನಾ ಸ್ಥಳದ ಪಕ್ಕದಲ್ಲೇ ಆರೋಪಿಯ ಅಡಿಕೆ ತೋಟ ಇರುತ್ತದೆ ಎಂದರೆ ಸರಿ. ನಾನು ಆರೋಪಿಗಳ ಜಮೀನನ್ನು ಪರಿಶೀಲನೆ ಮಾಡಿರುವುದಿಲ್ಲ. ಯಾಕೆ ಮಾಡಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ತನಿಖೆಗೆ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ. ಆರೋಪಿತರಿಗೂ ಪಿರ್ಯಾದಿಗೂ ದಾರಿಗೆ ಸಂಬಂಧಿಸಿದಂತೆ ಸಿವಿಲ್ ವ್ಯಾಜ್ಯ ಇದೆ ಎಂದರೆ ನನಗೆ ಗೊತ್ತಿಲ್ಲ. ನಾನು ಬೆನಪ್ಪನ ಗಿರಿಯಪ್ಪನವರ ಜಮೀನಿನ ಕಚ್ಚಾ ನಕ್ಷೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-2 ರಲ್ಲಿರುವ ನಕ್ಷೆಯಲ್ಲಿ ಗಲಾಟೆ ನಡೆದಿರುವ ಬಗ್ಗೆ ಉಲ್ಲೇಖ ಇಲ್ಲಾ ಎಂದರೆ ಸರಿಯಲ್ಲ. ನಾನು ಆರೋಪಿತರಲ್ಲಿ ಯಾವ ವಿಚಾರವಾಗಿ ಗಲಾಟೆಯಾಯಿತು ಎಂದು ಕೇಳಿರುವುದಿಲ್ಲ. ಚಾಸಾ-4 ರಿಂದ 6 ರವರು ಚಾಸಾ-1 ರವರ ಸಂಬಂಧಿಕರು ಎಂದರೆ ಸರಿ. ಈ ಪ್ರಕರಣದ ಸಲುವಾಗಿ ಸುಳ್ಳು ಮಹಜರನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಮಹಜರ್ ಮಾಡಲು ಯಾಕೆ ತಡ ಮಾಡಿರುತ್ತೀರಿ ಎಂಬ ಪ್ರಶ್ನೆಗೆ ಸಾಕ್ಷಿ ಮೊದಲ ಬಾರಿ ಮಹಜರು ಮಾಡಲು ಹೋದಾಗ ಅಲ್ಲಿ ಸಾಕ್ಷಿದಾರರು ಮತ್ತು ಪ್ರತ್ಯಕ್ಷ ಸಾಕ್ಷಿದಾರರು ಇಲ್ಲದ ಕಾರಣ ಇನ್ನೊಂದು ಬಾರಿ ಹೋಗಿರುತ್ತೇನೆ ಈ ವಿಚಾರವನ್ನು ಕೇಸ್ ಡೈರಿಯಲ್ಲಿ ನಮೂದಿಸಿರುತ್ತೇನೆ. ಪಿರ್ಯಾದುದಾರರು ದಿಃ 26.08.2021 ರಂದು ತಡವಾಗಿ ಯಾಕೆ ಮರು ಹೇಳಿಕೆ ನೀಡಿರುತ್ತಾರೆ ಎಂಬ ಬಗ್ಗೆ ಉಲ್ಲೇಖ ಇಲ್ಲಾ ಎಂದರೆ ಸರಿ. ನಾನು ಸಾಕ್ಷಿದಾರರ ಹೇಳಿಕೆ ಹಾಗೂ ಸಂಪೂರ್ಣ ದಾಖಲೆಯನ್ನು ಪರಿಶೀಲನೆ ಮಾಡಿರುತ್ತೇನೆ ಎಂದರೆ ಸರಿ. ಕುರಿ ಮತ್ತು ಮೇಕೆಗೆ ವ್ಯತ್ಯಾಸ ಇದೆ ಎಂದರೆ ಸರಿ. ಕೃತ್ಯ ನಡೆದ ಸ್ಥಳಕ್ಕೂ ಮುಮಾ ಗೂ ಆರೋಪಿಗೂ ಸಂಬಂಧ ಇಲ್ಲದಿದ್ದರೂ ಸಹ ಆರೋಪಿಗಳಿಗೆ ತೊಂದರೆ ನೀಡುವ ಸಲುವಾಗಿ ಪಿರ್ಯಾದಿಯೊಂದಿಗೆ ಶಾರೀಖಾಗಿ ಸುಳ್ಳು ದೋಷಾರೋಪಣಾ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸರಿಯಾಗಿ ತನಿಖೆ ಮಾಡದೇ ದೋಷಾರೋಪಣಾ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.